
①

S.K. ARTS COLLEGE & H.S.K. SCI. INST., HUBBALLI 580 031.




ಮುಖ್ಯಸ್ಥರು
ಕನ್ನಡ ವಿಭಾಗ

PRINCIPAL,
S.K.Arts College & H.S.K. Sci. Inst.
HUBBALLI-31

ಹೆಸರು :- ವಿಶ್ವನಾಥ. ರ. ಹಡಪದ

ವರ್ಗ :- ಬಿ. ಎ. ಪ್ರಥಮ ಸೆಮಿಸ್ಟರ್

ಕಾಲೇಜು :- ಎಸ್. ಕೆ. ಆರ್ಟ್ಸ್ ಕಾಲೇಜು & ಎಚ್. ಎಸ್. ಕೆ. ಇನ್ಸ್ಟಿಟ್ಯೂಟ್
ವಿಜ್ಞಾನ ಕಾಲೇಜ ಹುಬ್ಬಳ್ಳಿ



ನಾಳೆ ಬರುವುದು ನಮಗಿಂದೆ ಬರಲಿ;
ಇಂದು ಬರುವುದು ನಮಗೀಗಲೇ ಬರಲಿ;
ಇದಕಾರಂಜುವರು, ಇದಕಾರಳುಕುವರು?
"ಜಾತಸ್ಯ ಮರಣಂ ಧ್ರುವಂ" ಎಂಬುದಾಗಿ
ನಮ್ಮ ಕೂಡಲಸಂಗಮದೇವರು ಬರೆದ
ಬರಹವ ತಪ್ಪಿಸುವರೆ ಹರಿ ಬ್ರಹ್ಮಾದಿಗಳಿಗಳವಲ್ಲ!

...ಜೀವನವೆಂಬ ಸಮರದಲ್ಲಿ ಹೋರಾಡಲಾರದೆ ಆತ್ಮಕ್ಕೆ ಬಾರಿಬಾರಿಯೆಂದು ದಾರ್ಶನಿಕರು -ವ ಜೀವಿಯ ಲಕ್ಷಣ. ಆತ್ಮಕ್ಕನ್ನು ಅಜ್ಞಾನಿ ಭಯವೆಂದಾಗಲಿ ಸಾವಿನ ಭಯವೆಂದು ಜೀವನ ಲಕ್ಷಣ. ಇಂತಹ ಜೀವನ ಥ್ರಿಲ್ಲರ್, ನಾಟಕಗಳು ಅಜ್ಞಾನಿಗಳೆಂಬುದನ್ನು ಈ ಜೀವನದಲ್ಲಿ ನಾವು ನೋಡುತ್ತೇವೆ. ನಾಳೆ ಬರಲಿರುವ ಕಷ್ಟ ನಾಳೆಯೇ ಬಾರದೆ ಮುಂದಕ್ಕೆ ಹೋಗಲಿ ಎನ್ನದೆ ನಾಳೆ ಬರುವುದು ನಮಗಿಂದೇ ಬರಲಿ ಎಂದು, ಇಂದು ಬರುವುದು ಅಜ್ಞಾನಿ ಅದನ್ನು ಎದುರಿಸಲು ಸಿದ್ಧರಾಗಿದ್ದಾರೆ. ಅಣ್ಣನವರು ಹುಟ್ಟಿದವನಿಗೆ ಮರಣ ತಪ್ಪಿದ್ದಲ್ಲ. ಅದಕ್ಕೆ ಅಂಜಬೇಕೇಕೆ? ಅಳುಕಬೇಕೇಕೆ? ದೇವರು ನೀಡಿದ ಪ್ರಸಾದವೆಲ್ಲದೆ ಬೇರೆಂದಲ್ಲ. ಅದನ್ನು ಸ್ವಾಗತಿಸುವುದು ಶರಣನ ಆದ್ಯ ಕರ್ತವ್ಯ. ಅಂತೆಯೇ ಶರಣರು 'ಮರಣವೇ ಮಹಾನವಮಿ' ಎಂದು ಬಗೆದಿದ್ದರು. ಇಂತಹ ಶರಣರಿಗೆ ಮರಣದ ಭಯದ ಭೀತಿಯನ್ನು ತರುವ ಹಿಂದು ಕಾಲ ಬರುವಾಗಲೇ ಮಹಾನವಮಿ ಹಬ್ಬವಾಗಿ ಸಂತಸವನ್ನು ತರುವ ಪ್ರಕ್ರಿಯೆ ಆಗುತ್ತಿತ್ತು...

ಬಸವಣ್ಣನವರು ಹನ್ನೆರಡನೇ ಶತಮಾನದ ಜೀವನದಲ್ಲಿ ಕ್ರಾಂತಿಕಾರಿಗಳಾಗಿ ಬದುಕಿದವರು ಒಂದು ಸಮಾಜಕ್ಕೆ ಕೊಟ್ಟಿದ್ದಾರೆ ಜೀವನದ ಸ್ವಾರಸ್ಯ ಇಷ್ಟೇ ಕ್ರಾಂತಿಕಾರಕವಾಗಿ ಕಷ್ಟಗಳನ್ನು ಎದುರಿಸಬೇಕು ಎಂಬುದು ಬಸವಣ್ಣನವರ ಆಶಯದ ಬದುಕು ಆಗಿದೆ...

ಹೆಸರು:- ಚೇತನಾ. ಸೋ. ಕೊಂಡಿಗೌಳಿ
ಬಿ. ಎ. ದ್ವಿತೀಯ ವರ್ಷ
ಎಸ್. ಕೆ. ಕಲಾ ಮತ್ತು ಎಚ್. ಎಸ್. ಕೆ. ವಿಜ್ಞಾನ ಮಹಾವಿದ್ಯಾಲಯ

EGE & H.S.K. SCI. INST. HUBBALLI 580 031.

## :- ಬಸವ ಜಯಂತಿ ನಿಮಿತ್ತ :-

## :- ವಚನ ವಿವರಣೆ ಸ್ಪರ್ಧೆ :-

**ವಚನ -** ಒಲೆಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆಹತ್ತಿ ಉರಿದಡೆ ನಿಲಲುಬಾರದು
ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವಡೆ
ನಾರಿ ತನ್ನ ಮನೆಯಲ್ಲಿ ಕಳುವಡೆ,
ತಾಯ ಮೊಲೆವಾಲು ನಂಜಾಗಿ ಕೊಲುವಡೆ
ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ.

**ವಿವರಣೆ -** ಮಹಾಮಾನವತಾವಾದಿ, ಭಕ್ತಿ ಭಂಡಾರಿ ಬಸವಣ್ಣನವರ ವಚನ ಅಂದಿಗೂ, ಇಂದಿಗೂ ಮುಂದಿಗೂ ಎಂದೆಂದಿಗೂ ಪ್ರಸ್ತುತ. ಅತ್ಯಂತ ಸರಳ ಭಾಷೆಯಲ್ಲಿ ಸಾಮಾನ್ಯ ಜನರಿಗೆ ಅನೇಕ ರೀತಿಯ ಮೌಲ್ಯಗಳನ್ನು ಅರ್ಥೈಸಿದ್ದಾರೆ. ಅವರ ಅನೇಕ ವಚನಗಳಲ್ಲಿ ಈ ಮೇಲಿನ ವಚನವು ನನ್ನ ಗಮನ ಸೆಳೆಯಿ

ಈ ವಚನದಲ್ಲಿ ಬಸವಣ್ಣನವರು ನಂಬಿದವರೆ ಮೋಸ ಮಾಡಿದಾಗ ಆಗುವ ನೋವನ್ನು ವಿವರಿಸಿದ್ದಾರೆ. ಬೇರೆ ಬೇರೆ ಸನ್ನಿವೇಶಗಳ ಉದಾಹರಣೆ ನೀಡುತ್ತಾ ಕಾಯಬೇಕಾದವರೆ ಕಾಡತೊಡಗಿದಾಗ ಆಗುವ ದುಃಖವನ್ನು ಮತ್ತು ಅಸಹಾಯಕತೆಯನ್ನು ಹೇಳಿದ್ದಾರೆ. ವಚನದ ಪ್ರಾರಂಭದಲ್ಲಿ ಒಲೆ ಏನಾದರೂ ಹತ್ತಿ ಉರಿದರೆ ಅದನ್ನು ನಿಲ್ಲಿಸಬಹುದು, ಇಲ್ಲವೇ ಆ ಒಲೆಯ ಉರಿಯನ್ನು ತಡೆದುಕೊಳ್ಳಬಹುದು. ಇದು ಸತ್ಯವಾಗಿರುವುದು. ಆದರೆ ಇಡೀ ಧರೆಯೇ ಹತ್ತಿ ಉರಿಯತೊಡಗಿದರೆ ನಿಲ್ಲಿಸಲು ಸಾಧ್ಯವಿಲ್ಲ, ತಡೆಯಲು ಸಾಧ್ಯವಿಲ್ಲ. ನಮ್ಮನ್ನು ಕಾಯಬೇಕಾದ ಧರೆಯೇ ಹತ್ತಿ ಉರಿಯ ತೊಡಗಿದರೆ ನಮ್ಮನ್ನು ಕಾಯುವವರು ಯಾರು ಎನ್ನುವ ಪ್ರಶ್ನೆಯನ್ನು ನೋಡಬಹುದು. ಅದೇ ರೀತಿ ಬಸವಣ್ಣನವರು ಬೇರೆ ಬೇರೆ ಉದಾಹರಣೆಗಳನ್ನು ನೀಡುತ್ತಾರೆ. ನೀರನ್ನು ಸಂಗ್ರಹಿಸಲು ಏರಿಯನ್ನು ಕಟ್ಟುತ್ತಾರೆ. ಆದರೆ ಆ ಏರಿಯೇ ಎದ್ದು ನೀರನ್ನು ನುಂಗಿದರೆ?, ಬೆಳೆಯನ್ನು ಅನ್ಯರಿಂದ ರಕ್ಷಿಸಲು ಬೇಲಿ ಕಟ್ಟುತ್ತಾರೆ ಆದರೆ ಆ ಬೇಲಿಯೇ ಬೆಳೆಯನ್ನು ಮೇಯ ತೊಡಗಿದರೆ? ಹೆಣ್ಣು ಸಂಸಾರದ ಕಣ್ಣು ಎನ್ನುತ್ತಾರೆ ಆದರೆ ಅಂತಹ ನಾರಿಯೇ ಮನೆಗೆ ಕನ್ನ ಹಾಕಿದರೆ? ಜಗತ್ತಿನಲ್ಲಿ ಶ್ರೇಷ್ಠ ಹಾಲು ತಾಯಿಯ ಮೊಲೆಹಾಲು ಆದರೆ ಅದೇ ನಂಜಾದರೆ? ಹೀಗೆ ಅನೇಕ ಪ್ರಶ್ನೆಗಳ ಮುಖಾಂತರ ಈ ಎಲ್ಲಾ ಸನ್ನಿವೇಶಗಳಲ್ಲಿ ದೂರುವುದು ಯಾರಿಗೆ ಎನ್ನುತ್ತಾರೆ. ಬಸವಣ್ಣನವರು ಕೂಡಲಸಂಗಮದೇವ

ನೆನೆಯುತ್ತ, ನಂಬಿದವರೆ ನಮಗೆ ಕೇಡು ಬಯಸುವುದ ಕಂಡು ಕರಬುತ್ತಾರೆ.

ಹೀಗೆ ಈ ವಚನದಲ್ಲಿ ಬಸವೇಶ್ವರರು ಕಾಯಬೇಕಾದವರೆ ಕೇಡು ಬಯಸಿದಾಗ ಯಾರಲ್ಲೂ ದೂರಲು ಸಾಧ್ಯವಿಲ್ಲ ಎಂದು ಹೇಳುವ ಅತ್ಯಂತ ಅರ್ಥಪೂರ್ಣ ವಚನ ಇದಾಗಿದೆ.

S.K. ARTS COLLEGE & H.S.K. SCI. INST. HUBBALLI 580 031.

Scanned with Oken Scanner

ವಿದ್ಯಾಕುಮಾರಿ ಶ್ರೀ, ದಾಸರ
B.Sc III^rd year

S.K. AR... ...LLEGE & H.S.K. ... INST.
HUBBALLI
580 031

ವಚನ :-

ಬೇವಿನ ಬೀಜವ ಬಿತ್ತಿ
ಬೆಲ್ಲದ ಕಟ್ಟೆಯ ಕಟ್ಟಿ
ಆಕಳ ಹಾಲನೆರೆದು
ಜೇನುತುಪ್ಪವ ಹೊಯ್ದರೆ
ಸಿಹಿಯಾಗಿ ಬಲ್ಲುದೆ
ಕಹಿಯಹುದಲ್ಲದೆ?
ಶಿವಭಕ್ತರಲ್ಲದವರ ಕೂಡೆ
ನುಡಿಯಲಾಗದು
ಕೂಡಲಸಂಗಮದೇವ

ನಿರ್ವಚನ :-

ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ, ಆಕಳ ಹಾಲನೆರೆದು, ಜೇನುತುಪ್ಪವ ಹೊಯ್ದರೆ ಸಿಹಿಯಾಗ ಬಲ್ಲುದೆ ಕಹಿಯಹುದಲ್ಲದೆ? ಶಿವಭಕ್ತರಲ್ಲದವರ ಕೂಡೆ ನುಡಿಯಲಾಗದು ಕೂಡಲಸಂಗಮ ದೇವ.

ವಿಜಯಲಕ್ಷ್ಮಿ. ಎ. ಪಟ್ಟಣಶೆಟ್ಟಿ
B.Sc. IIIನೇ ವರ್ಷ.

S.K. ARTS COLLEGE & H.S.K. SCI. INST. ★ HUBBALLI 580 031.

**ವಚನ:**

ಹಬ್ಬಕ್ಕೆ ತಂದ ಹರಕೆಯ ಕುರಿ
ತೋರಣಕ್ಕೆ ತಂದ ತಳಿರ ಮೇಯಿತ್ತು!
ಕೊಂದಹರೆಂಬುದನರಿಯದೆ
ಬೆಂದೊಡಲ ಹೊರೆಯುತ್ತಲದೆ ?
ಅಂದೆ ಹುಟ್ಟಿತ್ತು ಅಂದೇ ಹೊಂದಿತ್ತು !!
ಕೊಂದವರುಳಿವರೆ ಕೂಡಲಸಂಗಮದೇವ.

**ನಿರ್ವಚನ:**

ಭಕ್ತಿಭಂಡಾರಿ, ಸಮಾಜ ಸುಧಾರಕ, ಕ್ರಾಂತಿಕಾರಿ, ಯುಗಪುರುಷ. ಜಗಜ್ಯೋತಿ ಬಸವಣ್ಣನವರ ವಚನಗಳು ಧೈರ್ಯದ ತಿರುಳನ್ನು ತಿಳಿಸುವಂತಹ ಭಂಡಾರಗಳು. ಸಮಾಜದ ಓರೆಕೋರೆಗಳನ್ನು ನಿರ್ಮೂಲಗೊಳಿಸುವ ಸದುದ್ದೇಶದಿಂದ ನುಡಿದವುಗಳು. ಅದೇ ರೀತಿ ಈ ವಚನವೂ ಒಂದು.

ಬಲಿಕೊಡುವದೆಂದು ತಂದ ಕುರಿಯು ತನಗೆ ಮುಂದೆ ಸಾವಿದೆ ಎಂದರಿಯದೆ ಬಾಗಿಲಿಗೆ ಕಟ್ಟಿದ ತೋರಣದ ಹಸಿರೆಲೆಗಳನ್ನು ತಿನ್ನುತ್ತದೆ. ತನ್ನವರಲ್ಲಿ ತನ್ನ ಕೊರಳನ್ನು ಕತ್ತರಿಸಲು ಕತ್ತಿಯ ಹಿಡಿಯುತ್ತಿರುವರು ಎಂಬ ಅರಿವು ಅದಕ್ಕಿಲ್ಲ. ಅದೇ ರೀತಿ ಈ ಮನುಷ್ಯನೂ ಕೂಡ ಬಲಿ ಕುರಿಯಂತೆ, ಸಾವು ಈಗಲೋ ಆಗಲೋ ಬರಲು ಸಿದ್ಧವಾಗಿದ್ದರೂ, ಸುಖಕ್ಕೆ ಬಲಿಗಳಂತಹ ಹೀನ ಕಾರ್ಯಗಳನ್ನೆಸಗುತ್ತಿರುವನು. ಎಂದು ಬಸವಣ್ಣನವರು ವಿವರಿಸಿದ್ದಾರೆ.

Scanned with Oken Scanner

# ಶ್ರೀ ವಿಶ್ವಗುರು ಬಸವೇಶ್ವರ ಜಯಂತಿಯ ನಿಮಿತ್ತ ವಚನ ನಿರ್ವಚನ ಸ್ಪರ್ಧೆ

ಹೆಸರು:- ಸಂಜನಾ ಕೆ. ಶೆಟ್ಟಿಮಠ
ವರ್ಗ :- BSc Ist (PCM)
ಹಾ.ಸಂ:- 131 (20S12050)

## ಭಕ್ತಸ್ಥಳ

ಒಲೆ ಹತ್ತಿಯುರಿದೊಡೆ ನಿಲ್ಲಬಹುದಲ್ಲದೆ
ಧರೆ ಹತ್ತಿಯುರಿಯೊಡೆ ನಿಲ್ಲಲಾಗದು
ಏರಿ ನೀರುಣ್ಣೊಡೆ ಬೇಲಿ ಕೆಯ್ಯ ಮೇಯ್ದೊಡೆ.
ನಾರಿ ತನ್ನ ಮನೆಯಲ್ಲಿ ಕಳುವೊಡೆ.
ತಾಯಿಯ ಮೊಲೆಹಾಲು ನಂಜಾಗಿ ಕೊಲುವೊಡೆ
ಇನ್ನಾರಿಗೆ ದೂರುವೆ, ಕೂಡಲಸಂಗಮದೇವಾ?

→ ಈ ವಚನದಲ್ಲಿ ಬಸವಣ್ಣನವರು ಈ ರೀತಿ ವಿಶ್ಲೇಷಿಸುತ್ತಿದ್ದಾರೆ. ಅಡಿಗೆ-ಮನೆಯಲ್ಲಿರುವ ಒಲೆ ಹೊತ್ತಿ ಉರಿದರೆ ಅದನ್ನು ನೀರು ಹಾಕಿ ಆರಿಸಬಹುದು. ಆದರೆ ಈಡೀ ಭೂಮಿಯೇ ಉರಿದರೆ ನಿಲ್ಲಲಾಗುವುದೇ ಇಲ್ಲ. ನೀರು ನಿಲ್ಲಲೆಂದು ಮಾಡಿದ ಒಡ್ಡು ನೀರನ್ನು ಕುಡಿದರೆ ಲಾಭವೇನು? ಬೇಲಿಯೇ ಹೊಲದ ಬೆಳೆಯನ್ನು ಮೇಯ್ದರೆ ಹಾಗೂ ತನ್ನ ಮನೆಯಲ್ಲಿಯೇ ಹೆಂಡತಿಯು ಕಳುವು ಮಾಡಿದರೆ ಏನು ದುರದೃಷ್ಟ, ತಾಯಿಯಂತ ಮಗುವಿಗೆ ಶಕ್ತಿ ಬರಲೆಂದು ಕೊಡುವ ಎದೆಹಾಲೇ ವಿಷವಾಗಿ ಕೊಲ್ಲುವಂತಾದರೆ, ಕೂಡಲ ಸಂಗಮದೇವಾ ಯಾರಿಗೆ ನಾವು ಮೊರೆಹೋಗಬೇಕು ದೇವಾ? ಎಂದು ಕೇಳಿಕೊಳ್ಳುತ್ತಿದ್ದಾರೆ. ಏಕೆಂದರೆ ನಮ್ಮನ್ನು ಕಾಪಾಡುವ ಶಕ್ತಿಯೇ ಕೊಲ್ಲಲು ನಿಂತಾಗ ನಾವೆಲ್ಲಿ ಮೊರೆಯಿಡಬೇಕು (ಬೇಡಿಕೊಳ್ಳಬೇಕು ಎಂದು ಈ ಮೇಲಿನ ವಚನದಲ್ಲಿ ತಿಳಿಸುತ್ತಿದ್ದಾರೆ.

S.K. ARTS COLLEGE & H.S.K. SCI. INST., HUBBALLI 580 031.

Scanned with Oken Scanner

K.L.E. Society's
SHRI KADASIDDHESHWAR ARTS COLLEGE AND
H. S. KOTAMBRI SCIENCE INSTITUTE
VIDYANAGAR, HUBBALLI-580031 (Karnataka State)
Accredited by NAAC at 'A' level with CGPA 3.18
Office: 0836-2372097 Website: skahsk.com E-mail: skahsk_hbl@yahoo.co.in

S.K. ARTS COLLEGE & H.S.K. SCI. INST. HUBBALLI 580 031.

Department of Kannada

Celebrates

**Basava Jayanti by organising**

VACHANA NIRVACHANA COMPETITION

May 14,2021

## Results

- **First place** Shruti Kusugalla BA I year
- **Second place** Anusha Rampur BA I year
- **Third place** Kavana Konduguli BA II year
- **Third place** Nanda Marnal BSC II year

**Dr.Vijayashree.Hiremath**
Head of the department
Kannada

**Dr.Uma.v Nerle**
Principal

PRINCIPAL,
S.K.Arts College & H.S.K. Sci. Inst
HUBBALLI-31

Scanned with Oken Scanner